ಆತ ಗಾಬರಿಯಿಂದ ಪೊಲೀಸ್ ಠಾಣೆಗೆ ಬಂದ. ಇನ್‌ಸ್ಪೆಕ್ಟರನ್ನು ಭೇಟಿಯಾದವನೇ ಕಣ್ಣೀರು ಸುರಿಸುತ್ತ ಸಾಹೇಬ್ರೆ, ನನ್ನ ಹೆಂಡತಿ ಮೂರು ದಿನದಿಂದ ಕಾಣ್ತಾ ಇಲ್ಲ. ದಯವಿಟ್ಟು ಹುಡುಕಿಕೊಡಿ ಎಂದು ಅಂಗಲಾಚಿಕೊಂಡ. ಆಯ್ತು, ನಡೀಯಯ್ಯಾ ಇನ್ನೆರಡು ದಿನದಲ್ಲಿ ಹುಡುಕಿಕೊಡ್ತೀನಿ ಎಂದು ಸಾಹೇಬ್ರು ಅವನನ್ನು ಸಾಗಹಾಕಿದರು. ಹೆಂಡತಿ ಸಿಗುವಳೆಂಬ ಆಶ್ವಾಸನೆಯ ಖುಷಿಯಿಂದ ಆತ ಮನೆಗೆ ಹೊರಟ.

ಹೊರಗಡೆ ಇದ್ದ ಪೊಲೀಸ್ ಕರೆದು ನಿಲ್ಲಿಸಿ ಹೇಳಿದ. ಅಯ್ಯೋ, ನಿನ್ನ ಹೆಂಡ್ತೀನ ಅವರೇನು ಹುಡುಕೋದು. ಹೋದವರ್ಷ ಹೋದ ಅವರ ಹೆಂಡ್ತೀನೇ ಇನ್ನೂ ಸಿಕ್ಕಿಲ್ಲ. ಮತ್ತೆ ಆತ ಅಳತೊಡಗಿದ.

***

ನಿಂಗ ನಾಚುತ್ತ, ಕೆಂಗ ಮಾವಾ, ನಾಳೆ ನನ್ನ ಮದುವೆ ಇದೆ ತಪ್ಪದೇ ಬಾ. ನನ್ನ ಮದ್ವೆ ಭಾಳ ಡಿಫರೆಂಟ್ ಇರ್ತದೆ ಅಂತ ಆಹ್ವಾನ ನೀಡಿದ.

ಅದೇನು ಡಿಫರೆಂಟಪಾ? ಅಂತ ಕೇಳಿದ ಕೆಂಗಣ್ಣ.

ನನ್ನ ಮದ್ವೇಲಿ... ನನ್ನ ಮದ್ವೇಲಿ... ಅಂತ ನಿಂಗ ರಾಗ ಎಳೆದ.

ಅದೇನ್ ಹೇಳಲೆ ಕೆಂಗಣ್ಣ ಅವಸರಿಸಿದ, ಕುತೂಹಲ ತಾಳಲಾರದೆ.

ಮತ್ತೆ ನನ್ನ ಮದ್ವೇಲಿ ನಾನು ತಾಳಿ ಕಟ್ಟಂಗಿಲ್ಲ.

ಮತ್ತೆ ಯಾರಲೇ ಕಟ್ಟೋರು ಕೆಂಗಣ್ಣ ಪ್ರಶ್ನಿಸಿದ.

ಮತ್ತೆ ನನ್ನ ಹೆಂಡ್ತಿ ಕಟ್ತಾಳೆ.

***


ನಿಂಗ: ನಾನು ಮದುವೆ ಆಗಲ್ಲ ಅಪ್ಪ, ನನಗೆ ಹುಡುಗಿಯರನ್ನು ಕಂಡ್ರೆ ಹೆದರಿಕೆ, ಭಯ ಆಗುತ್ತೆ.

ನಿಂಗನ ಅಪ್ಪ: ತಣ್ಣಗೆ ಮದುವೆ ಆಗು ಮಗನೆ, ಮದುವೆ ಆದ್ರೆ ಒಬ್ಬಳಿಗೆ ಹೆದರಿಕೊಳ್ಳಬಹುದು.

***

ರಂಗಿ: ಕೇಳಿಲ್ಲಿ, ಇವತ್ತು ನನ್ನ ಅತ್ತೆ ಮೇಲೆ ಚಿರತೆ ದಾಳಿ ಮಾಡಿದೆಯಂತೆ. ದೇವರೇ ಕಾಪಾಡಬೇಕು.

ನಿಂಗಿ: ಅತ್ತೆ ಮೇಲೆ ನಿನಗೆ ಅಷ್ಟೊಂದು ಕಳಕಳೀನಾ?




ನಿಂಗ: ಮದುವೆ ಮಂಟಪದಲ್ಲಿ ಫೋಟೋಗ್ರಾಫರ್ ಪದೇ ಪದೇ ಸ್ಮೈಲ್ ಪ್ಲೀಸ್ ಅಂತಿರ್ತಾನೆ ಗೊತ್ತಾ?

ಕೆಂಗ: ಗೊತ್ತಿಲ್ಲ. ಯಾಕೆ?

ನಿಂಗ: ನೀವು ನಗೋದು ಇವತ್ತೇ ಕೊನೇ ದಿನ ಒಂದಿಷ್ಟು ನಕ್ಕು ಬಿಡ್ರಿ ಅಂತ.

ರಂಗಿ: ಇಲ್ಲ. ಚಿರತೆ ಮೇಲೆ.

***

ಪ್ರಿಯತಮ: ಕೊರೊನಾ ಎರಡನೇ ಅಲೆ ಬಂದು ಛಲೋ ಆಯ್ತು.

ಪ್ರಿಯೆ: ಯಾಕ್ರಿ ಅದ್ಯಾಕೆ ಹಾಗಂತೀರಿ?

ಪ್ರಿಯತಮ: ಹೌದು. ಮಾಸ್ಕ್ ಹಾಕ್ಕೊಂಡ್ರೆ ಯಾರೂ ನಮ್ಮ ವಿಡಿಯೊ ಮಾಡಲ್ಲ. ಮಾಡಿದ್ರೂ ನಾವು ಗೊತ್ತಾಗಲ್ಲ.

ಪ್ರಿಯೆ: ಹೌದಲ್ಲ ಡಾರ್ಲಿಂಗ್, ಇದು ನನಗೆ ಹೊಳೆಯಲೇ ಇಲ್ಲ.

ಪ್ರಿಯತಮ: ಪ್ರೀತಿ ಕುರುಡಷ್ಟೇ ಅಲ್ಲ. ಮಂಕೂ ಅನ್ಸುತ್ತೆ ನಿನ್ನ ನೋಡಿದ್ರೆ.

***

ಮೇಷ್ಟ್ರು: ನೀವೆಲ್ಲ ಸತ್ಯವಂತರಾಗಿರಬೇಕು.

ಶಿಷ್ಯರು: ನೀವೂ ಅಷ್ಟೇ ಸಾರ್.

ಮೇಷ್ಟ್ರು: ನೀವೆಲ್ಲ ಪ್ರಾಮಾಣಿಕರಾಗಿರಬೇಕು.

ಶಿಷ್ಯರು: ನೀವೂ ಅಷ್ಟೇ ಸಾರ್.

ಮೇಷ್ಟ್ರು: ಲೋ, ಮುಠ್ಠಾಳರಾ..

ಶಿಷ್ಯರು: ನೀವೂ ಅಷ್ಟೇ ಸಾರ್.

***

ಡಾಕ್ಟರ್: ನಿನಗೆ ಶೀತ ಇದೆಯಾ?

ನಿಂಗ: ಹೌದು.

ಡಾಕ್ಟರ್: ನಿನಗೆ ಜ್ವರ ಇದೆಯಾ?

ನಿಂಗ: ಹೌದು.

ಡಾಕ್ಟರ್: ನಿನಗೆ ನೆಗಡಿ ಇದೆಯಾ?

ನಿಂಗ: ಹೌದು.

ಡಾಕ್ಟರ್: ನಿನಗೆ ಉಸಿರಾಟದ ತೊಂದ್ರೆ ಏನಾದರೂ ಇದೆಯಾ?

ನಿಂಗ: ಹೌದು ಡಾಕ್ಟ್ರೆ, ಎರಡು ದಿನದಿಂದ ನಾನು ಉಸಿರಾಡಿಯೇ ಇಲ್ಲ!

***

ಪ್ರಿಯೆ: ನಲ್ಲಾ, ನೀನು ನನ್ನ ಹತ್ರ ಇಲ್ಲ ಅಂದ್ರೆ ತಲೆನೋಯುತ್ತೆ.

ಪ್ರಿಯತಮ: ಮತ್ತೆ?

ಪ್ರಿಯೆ: ಅತ್ತು ಅತ್ತು ನೆಗಡಿ ಬರುತ್ತೆ.

ಪ್ರಿಯತಮ: ಮತ್ತೆ?

ಪ್ರಿಯೆ: ಜ್ವರ ಬಂದು ರಾತ್ರಿ ಹಾಸಿಗೆಯಲ್ಲೆಲ್ಲ ಒದ್ದಾಡ್ತೇನೆ.

ಪ್ರಿಯತಮ: ಮೊದಲು ಟೆಸ್ಟ್ ಮಾಡಿಸಿಕೋ, ಇದು ಪ್ರೀತಿ ಅಲ್ಲ. ಕೊರೊನ ಬಂದಿರಬೇಕು.

***

ಅದೇ ಆಗ ನಿಂಗ ಮಾಸ್ತರಾಗಿದ್ದ. ಮೊದಲ ದಿನ ಪಾಠಕ್ಕೆ ಹೋಗುವ ಉತ್ಸಾಹದಲ್ಲಿ ಸಹೋದ್ಯೋಗಿಯೊಬ್ಬರನ್ನು ಕೇಳಿದ ವಿದ್ಯಾರ್ಥಿಯನ್ನು ಎಲ್ಲಿಯವರೆಗೆ ಹೊಡೆಯಬೇಕು?

ಆತ ತಿರುಗಿ ಹೊಡೆಯುವವರೆಗೆ! ತಕ್ಷಣ ಉತ್ತರ ಬಂತು.

(ಸಂಗ್ರಹ) ಪ್ರಕಾಶ ಎಸ್. ಮನ್ನಂಗಿ,
ಮೋಟೆಬೆನ್ನೂರು

ಹೆಣ್ಣು ನೋಡುವ ಕಾರ್ಯಕ್ರಮದಲ್ಲಿ ಕಾಫಿ, ತಿಂಡಿ ಉಪಚಾರಗಳ ನಂತರ, ಅಲಂಕಾರ ಮಾಡಿಕೊಂಡ ಹೆಣ್ಣು ಪೋಸ್ ಕೊಟ್ಟಿದ್ದು ಆಯಿತು, ಆನಂತರ ಹೆಣ್ಣಿನ ತಂದೆ ಗೋಪಾಲಯ್ಯ ಗಂಡಿನ ತಾಯಿ ಕಮಲಮ್ಮನವರಿಗೆ

ಗೋಪಾಲಯ್ಯ: ನಿಮ್ ಹುಡುಗ ಏನಂತಾನೆ?

ಕಮಲಮ್ಮ: ನಿಮ್ ಹುಡುಗಿಗೆ ಎಷ್ಟು ಸಂಬಳ ಅಂತಾನೆ.

***

ರಮೇಶ: ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಆಡಳಿತ ಇದ್ದರೂ ಏರುತ್ತಿರುವ ಬೆಲೆಗಳು ಡೌನ್ ಆಗುವ ಲಕ್ಷಣಗಳೆ ಕಾಣುತ್ತಿಲ್ಲವಲ್ಲ?

ವಾಸು: ಕೊರೊನಾ ನೆಪದಲ್ಲಿ ಲಾಕ್ ಡೌನ್ ಆಗುವ ಲಕ್ಷಣಗಳು ಕಾಣುತ್ತಿವೆಯಲ್ಲ !

***

ಸಮಾಜ ಶಿಕ್ಷಕರು ಭಾರತದ ಜನಸಂಖ್ಯೆ ಏರಿಕೆಗೆ ಅನಕ್ಷರತೆ, ಅಜ್ಞಾನ ಬಾಲ್ಯವಿವಾಹ, ಪುತ್ರವ್ಯಾಮೋಹ ಪ್ರಮುಖ ಕಾರಣಗಳು. . .

ನಡುವೆ ಮಾತನಾಡಿದ ವಿದ್ಯಾರ್ಥಿ ವೆಂಕಟೇಶ್ 'ಜನಸಂಖ್ಯೆ ಏರಿಕೆಗೆ ಮೊಟ್ಟಮೊದಲ ಕಾರಣ ಜನ ಸ್ಸಾರ್'

***

ಕನ್ನಡ ಶಿಕ್ಷಕರಾದ ಕೆಂಪೇಗೌಡರು ಹರಿಶ್ಚಂದ್ರನ ಸತ್ಯದ ಅಚಲ ಬದ್ಧತೆಯನ್ನು ವಿದ್ಯಾರ್ಥಿಗಳಿಗೆ ವಿವರಿಸುತ್ತಾ 'ಜೀವನದಲ್ಲಿ ಎಷ್ಟೇ ಕಷ್ಟ ಎದುರಾದರೂ ಬದಲಾಗಬಾರದು' ಎಂದರು.

ವಿದ್ಯಾರ್ಥಿ: ಬದಲಾವಣೆ ಜಗದ ನಿಯಮ ಅಂತ ನಿನ್ನೆ ಹೇಳಿದ್ರಲ್ಲಾ ಸ್ಸಾರ್!

***

ತರಗತಿಯಲ್ಲಿ ಮೋಹನ ಮತ್ತು ಮದನ ಪರಸ್ಪರ ಮಾತನಾಡುತ್ತಿದ್ದರು ಪಿತ್ತ ನೆತ್ತಿಗೇರಿಸಿಕೊಂಡ ಗಣಿತ ಶಿಕ್ಷಕ ಗೋಪಾಲ್ ಅವರಿಬ್ಬರ ನಿಲ್ಲಿಸಿ 'ನಿಮ್ಗೆ ಹೇಗ್ ಪಾಠ ಕಲಿಸ್ಬೇಕು ಅಂತ ನಂಗೊತ್ತು'

ಮೋಹನ್: (ಸ್ವಗತ) ಅದ್ಕೆ ಅಲ್ವೇ ನಿಮ್ಗೆ ಸಂಬಳ ಕೊಡ್ತಾ ಇರೋದು.

***

ಇಂಗ್ಲಿಷ್ ಶಿಕ್ಷಕ: ಎಸ್ಸೆಸ್ಸೆಲ್ಸಿ ಜೀವನದ ಟರ್ನಿಂಗ್ ಪಾಯಿಂಟ್. ಮುಖ್ಯ ಪರೀಕ್ಷೆಗೆ ಎಷ್ಟು ದಿನಗಳು ಉಳಿದಿವೆ? ಎಂದರು

ವಿದ್ಯಾರ್ಥಿ: ಕೊರೊನಾ ಕಾಲದಲ್ಲಿ ಕರೆಕ್ಟಾಗಿ ಹೇಳೋಕ್ಕಾಗೊಲ್ಲ ಸ್ಸಾರ್.

ಸಂಗ್ರಹ : ಮಲ್ಲಿಕಾರ್ಜುನ ಸುರಧೇನುಪುರ

***